OS 147/2010
PW-1

ದಿನಾಂಕಃ **29.11.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**.**

**<u>ಪಾಟೀ ಸವಾಲುಃ ಪ್ರತಿ ವಾದಿ ಪರ ಶ್ರೀ .ಸಿ.ಎಸ್.ಎನ್ . ವಕೀಲರಿಂದಃ</u>**

**1.** ನಾನು ಚಿಕ್ಕವಳಾಗಿದ್ದಾಗ ನನ್ನ ತಂದೆ ಬೋಡಿಲಿಂಗೇಗೌಡರ ತೀರಿಕೊಂಡಿದ್ದರು ನಿಖರವಾಗಿ ದಿನಾಂಕ ಗೊತ್ತಿಲ್ಲ. ಸದರಿ ಬೋಡಿಲಿಂಗೇಗೌಡ ರಿಗೆ ಸಿದ್ದಮ್ಮ ಮತ್ತು ಹೊನ್ನಮ್ಮ ಇಬ್ಬರು ಹೆಂಡತಿಯರು ಎಂದರೆ ಸರಿ. ಹೊನ್ನಮ್ಮ ನಿಗೆ ಇಬ್ಬರು ಮಕ್ಕಳು ನಾನು ಮತ್ತು ಶಿವಲಿಂಗಯ್ಯ. ಸಿದ್ದಮ್ಮನಿಗೆ ಕೆಂಪಮ್ಮ ಎಂಬ ಒಬ್ಬಳೇ ಮಗಳು ಇದ್ದಳು. ಕೆಂಪಮ್ಮ ಈಗ ಜೀವಂತ ಇದ್ದಾರೆ ಎಂದರೆ ಸರಿ. ಸ.ನಂ **186/1** ವಿಸ್ತೀರ್ಣ **9** ಗುಂಟೆ ಜಮೀನಿಗೆ ಸಂಬಂಧಿಸಿದಂತೆ ದಾವೆ ದಾಖಲಿಸಿದ್ದಾರೆ. ಸದರಿ ಜಮೀನಿನ ಚಕ್ಕುಬಂದಿ ಪೂಃ ಲಿಂಗೇಗೌಡ ಮತ್ತು ತಮ್ಮಯ್ಯರವರ ಜಮೀನು**,** ಪಃ ಆನೇಕಲ್ ರಸ್ತೆ**,** ಉಃ ಕೆಂಪಯ್ಯನವರ ಜಮೀನು **,** ದಃ ಮಾದೇಗೌಡರ ಜಮೀನು. ಸದರಿ ಜಮೀನು ಮೂಲತಃ ನನ್ನ ತಂದೆಗೆ ಸೇರಿದ್ದು. ಸ.ನಂ **186/1** ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನಿನ ವಿಸ್ತೀರ್ಣ **4** ಎಕರೆ **15** ಗುಂಟೆ ಜಮೀನು ಎಂದರೆ ಸರಿ. ಮೂಲತಃ ಸದರಿ ಜಮೀನು ದೊಡ್ಡ ಅಂಕೇಗೌಡರ ಕುಟುಂಬಕ್ಕೆ ಸೇರಿದ ಜಮೀನು ಎಂದರೆ ಸರಿ.

**2.** ಸದರಿ ಅಂಕೇಗೌಡರು ದಿಃ **26.06.1967** ರಂದು ಸದರಿ ಜಮೀನಿನಲ್ಲಿ **18** ಗುಂಟೆ ಜಮೀನನ್ನು ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ**-3** ಮತ್ತು **4** ರಲ್ಲಿ ಮಾದೇಗೌಡರ ಹೆಸರು ನಮೂದಾಗಿದೆ ಎಂದರೆ ಸರಿ. **1967** ರಿಂದ ಸದರಿ **15** ಗುಂಟೆ ಜಮೀನನ್ನು ಸದರಿ ಮಾದೇಗೌಡರವರೆ ಸ್ವಾಧೀನದಲ್ಲಿದ್ದು ಅವರೇ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರಿದು ನಾನು ಮತ್ತು ನನ್ನ ತಮ್ಮ ಮಾಡುತ್ತಿದ್ದೆವು. ಮಾದೇಗೌಡರ ಜಮೀನನ್ನು ಕಬಳಿಸಬೇಕೆಂದು ಮಾದೇಗೌಡರ ಜಮೀನಿನ ಚಕ್ಕುಬಂದಿಯನ್ನು ತೋರಿಸಿ ದಾವೆ ದಾಖಲಿಸಿ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ಸದರಿ

ಮಾದೇಗೌಡರವರು ಇದೆ ನ್ಯಾಯಾಲಯದಲ್ಲಿ ದಾವಾ ಸಂಖ್ಯೆ **236/2001** ಎಂದು ದಾಖಲಿಸಿದ್ದು ಮತ್ತು ಅದು ಡಿಕ್ರಿ ಆಗಿದೆ ಎಂದರೆ ಸರಿಯಲ್ಲ.

**3.** ಸದರಿ ಡಿಕ್ರಿ ವಿರುದ್ದ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ. ಸಾಕ್ಷಿ ಮುಂದುವರಿದು **9** ಗುಂಟೆ ಗೆ ಸಂಬಂಧಿಸಿದಂತೆ ಈ ದಾವೆ ಸಲ್ಲಿಸಿದ್ದೇನೆ. ನನಗೆ ಮದುವೆ ಆಗಿ **35** ವರ್ಷ ಆಯಿತು. ನಾನು ನನ್ನ ಗಂಡನ ಊರಾದ ಗೋದೂರಿನಲ್ಲಿ ವಾಸ ಇದ್ದೇನೆ ಎಂದರೆ ಸರಿ ಸಾಕ್ಷಿ ಪುನಃ ನನ್ನ ತಂದೆ ಮನೆಯಲ್ಲಿ ವಾಸವಾಗಿದ್ದೇನೆ. ನನ್ನ ತಮ್ಮ ತೀರಿಕೊಂಡಾಗ ಅವನಿಗೆ **24** ವರ್ಷ . ಅವನು ಸಾಯುವ ಮೊದಲು ಕಮಲಾಪುರದಲ್ಲಿ ವಾಸವಾಗಿದ್ದ. ದಾವಾ ಆಸ್ತಿ ಬಿಟ್ಟು ನನ್ನ ಬೇರೆ ಬೇರೆ ಸ್ವತ್ತು ಇವೆ ಎಂದರೆ ಸರಿ. ಬೇರೆ ಸ್ವತ್ತುಗಳನ್ನು ನನ್ನ ತಮ್ಮ ನೋಡಿಕೊಳ್ಳುತ್ತಿದ್ದ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನನ್ನ ತಂದೆಗಾಗಲೀ ನನ್ನ ತಮ್ಮನಿಗೇ ಆಗಲಿ ಕ್ರಯ ಪತ್ರ ಆದ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಇದು ನನ್ನ ತಾತನಿಂದ ಬಂದ ಆಸ್ತಿ. ದೊಡ್ಡ ಅಂಕೇಗೌಡನಿಗೆ **5** ಜನ ಮಕ್ಕಳು. ಮಾದ , ಕೆಂಪೇಗೌಡ , ವರದ ಉರುಫ್ ಚಿಕ್ಕ, ಈರೇಗೌಡ ಮತ್ತು ಶಿವಲಿಂಗಯ್ಯ ರವರು ಅಂಕೇಗೌಡರು ಕುಟುಂಬಸ್ಥರು ಇರುವುದಿಲ್ಲ ಎಂದರೆ ಸರಿ.

**4.** ನನ್ನ ತಂದೆಯ ಬೇರೆ ಸ್ವತ್ತುಗಳು ಈಗ ನನ್ನ ತಮ್ಮ ಶಿವಲಿಂಗಯ್ಯನ ಹೆಸರಿನಲ್ಲಿ ಇವೆ. ಶಿವಲಿಂಗಯ್ಯ ಸದರಿ ಸ್ವತ್ತುಗಳು ನನಗೆ ಸೇರಿಬೇಕೆಂದು ಯಾವುದೇ ಪತ್ರವನ್ನು ಮಾಡಿರುವುದಿಲ್ಲ. ದಾವಾ ಆಸ್ತಿಯ ಬಗ್ಗೆ ನಕಾಶೆಯನ್ನು ನ್ಯಾಯಾಲಯದಲ್ಲಿ ಹಾಜರು ಮಾಡಿರುವುದಿಲ್ಲ. ಪ್ರತಿವಾದಿಯ ಕುಟುಂಬದವರು ದಾವ ಆಸ್ತಿಯ ಸ್ವಾಧೀನದಲ್ಲಿದ್ದು ಅವರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲಿ ಯಾವತ್ತು ಸ್ವಾಧೀನದಲ್ಲಿ ಇಲ್ಲ ಮತ್ತು ವ್ಯವಸಾಯ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ಸ್ವತ್ತು ಇರುವುದಿಲ್ಲ ಮತ್ತು

ತಪ್ಪು ಚೆಕ್ಕುಬಂದಿ ತೋರಿಸಿ ಪ್ರತಿವಾದಿ ಜಮೀನನ್ನು ತೋರಿಸಿ ದಾವೆಯಲ್ಲಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ.

**5.** ನನ್ನ ತಮ್ಮ ಯಾವ ದಿನಾಂಕದಂದು ತೀರಿಕೊಂಡ ಎಂದು ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರಿದು ನಾನು ವಿದ್ಯಾವಂತೆ ಅಲ್ಲ. ನಿಪಿ- **7** ದಾವಾ ಆಸ್ತಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ನಿಪಿ-**6** ನ್ನು ದಾವೆಯ ಸಲುವಾಗಿ ಸೃಷ್ಟಿ ಮಾಡಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ.